# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ವಾರ್ಡ್ ಸಂಖ್ಯೆ 11/ಸಭೆ/ಪಿಆರ್/ /2021-22 ದಿನಾಂಕ : 21/03/2022

**ಮಾನ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ ಬಿ12(5)/ಪಿ.ಆರ್/35/2020-21 ದಿನಾಂಕ 21/09/2020ರ ಆದೇಶದ ಅನ್ವಯ ಕುವೆಂಪುನಗರಕ್ಕೆ ಸಂಬಂಧಿಸಿದಂತೆ ವಾರ್ಡ್ ನಂ 11 ಕುವೆಂಪುನಗರ ವಾರ್ಡ್ ಕಛೇರಿಯಲ್ಲಿ ದಿನಾಂಕ 21/03/2022 ರಂದು ನೋಡೆಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ಕೈಗೊಂಡ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ಹಾಜರಿದ್ದ ಅಧಿಕಾರಿ /ನೌಕರರು**

1. ಶ್ರೀ ಪ್ರಸನ್ನ ವೆಂಕಟೇಶ್, ನೋಡಲ್ ಅಧಿಕಾರಿ
2. ಶ್ರೀ ಸೋಮಶೇಖರ್ ಜಿ.ಎಲ್, ಸಹಾಯಕ ಅಭಿಯಂತರರು & ಕಾರ್ಯದರ್ಶಿ ಹಾಗೂ ಸಂಚಾಲಕರು
3. ಶ್ರೀ ವಿನಯ್ ಕುಮಾರ್, ಸಹಾಯಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್ಬಿ
4. ಶ್ರೀ ಗೋಪಿ, ತೆರಿಗೆ ವಸೂಲಿಗಾರರು
5. ಶ್ರೀ ಭಾರ್ಗವ್ ಪಿ.ಎನ್, ಹಿರಿಯ ಆರೋಗ್ಯ ಪರಿವೀಕ್ಷಕರು
6. ಶ್ರೀ ಸುನೀಲ್, ಮಾರ್ಷಲ್
7. ಮಾರ್ಷಲ್ ಮೇಲ್ವಿಚಾರಕರು

**ಹಾಜರಿದ್ದ ಸದಸ್ಯರು/ ಸಾರ್ವಜನಿಕರು**

1. ಶ್ರೀ ಮೋಹನ್, ಸಿಂಗಾಪುರ
2. ಶ್ರೀ ವಿನೋದ್, ಪ್ರಕೃತಿ ಲೇಔಟ್
3. ಶ್ರೀ ಹರೀಶ್, ವರದರಾಜನಗರ
4. ಶ್ರೀ ಗುರುಪ್ರಸಾದ್, ಸಿಂಗಾಪುರ ಪ್ಯಾರಡೈಸ್
5. ಶ್ರೀ ಓಂಕಾರಮೂರ್ತಿ, ವೈಷ್ಣವಿ ಲೇಔಟ್
6. ಶ್ರೀ ಶಿವಕುಮಾರ್, ಪ್ರಕೃತಿ ಲೇಔಟ್
7. ಶ್ರೀ ಭರತ್, ವರದರಾಜನಗರ

**ಶ್ರೀ ಪ್ರಸನ್ನ ವೆಂಕಟೇಶ್, ನೋಡೆಲ್ ಅಧಿಕಾರಿ:-** ಸಭೆಗೆ ಹಾಜರಿದ್ದ ಅಧಿಕಾರಿಗಳಿಗೆ ಸ್ವಾಗತವನ್ನು ಕೋರಿದರು. ಹಾಗೂ ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ಕಾರ್ಯದರ್ಶಿಗೆ ತಿಳಿಸಿದರು.

**ಶ್ರೀ ಭರತ್, ವರದರಾಜನಗರ :-** ದಿನೇ ದಿನೇ ಬ್ಲಾಕ್‌ಸ್ಪಾಟ್‌ಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಕಡಿಮೆ ಮಾಡಲು, ವರದರಾಜನಗರದಲ್ಲಿರುವ ಅಬ್ದುಲ್ ಕಲಾಂ ಮೈದಾನದಲ್ಲಿರುವ ದೊಡ್ಡದಾದ ವಿದ್ಯುತ್ ದೀಪದಿಂದ ಅನಾಹುತ ಉಂಟಾಗುವ ಸಂಭವವಿರುವುದರಿಂದ ಸರಿಪಡಿಸಲು ಕೋರಿದರು.

**ನೋಡೆಲ್ ಅಧಿಕಾರಿಗಳು ಮಾತನಾಡುತ್ತಾ ಸಂಬಂಧ ಪಟ್ಟವರಿಗೆ ಸೂಕ್ತ ಕ್ರಮ ವಹಿಸಲು ತಿಳಿಸಲಾಗುವುದು ಎಂದು ಹೇಳಿದರು.**

**ಶ್ರೀ ಹರೀಶ್:-** ವರದರಾಜನಗರ 1ನೇ, 2ನೇ ಹಾಗೂ 3ನೇ ಅಡ್ಡರಸ್ತೆಗಳಲ್ಲಿ ಚರಂಡಿ ಕಾಮಗಾರಿ ಅಪೂರ್ಣಗೊಂಡಿದ್ದು, ಪೂರ್ಣಗೊಳಿಸಲು ಹಾಗೂ 3ನೇ ಮತ್ತು 7ನೇ ಅಡ್ಡರಸ್ತೆಗಳ ಚರಂಡಿಗಳಲ್ಲಿ ತುಂಬಿರುವ ಹೂಳು ಮತ್ತು ಮಣ್ಣನ್ನು ತೆರವುಗೊಳಿಸಲು ಕೋರಿದರು
**ಸಹಾಯಕ ಅಭಿಯಂತರರು ಮಾತನಾಡುತ್ತಾ ಪರಿಶೀಲಿಸಿ ಕ್ರಮವಹಿಸುವುದಾಗಿ ತಿಳಿಸಿದರು.**

**ಶ್ರೀ ಗುರುಪ್ರಸಾದ್ :-** ಸಿಂಗಾಪುರ ಪ್ಯಾರಡೈಸ್‌ನಲ್ಲಿ ಪ್ರಾಣಿ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಹಾಕದೆ ವೈಜ್ಞಾನಿಕ ಮಾದರಿಯನ್ನು ಅನುಸರಿಸಿ ಹೂಳಲು, ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಅಗೆದು ಹಾಳಾಗಿರುವ ರಸ್ತೆಯನ್ನು ಸರಿಪಡಿಸಲು ಕೋರಿರುತ್ತಾರೆ.

**ಶ್ರೀ ಶಿವಕುಮಾರ್, ಪ್ರಕೃತಿ ಲೇಔಟ್ :-** ಪ್ರಕೃತಿ ಲೇಔಟ್‌ನಲ್ಲಿ ಸಿ.ಸಿ ಕ್ಯಾಮರಾ ಸರಿಯಾಗಿ ಕಾರ್ಯ ನಿರ್ವಹಿಸದೆ ಇರುವ ಬಗ್ಗೆ, ಬೀದಿ ದೀಪಗಳ ಸಮಸ್ಯ, ಬೀದಿ ದೀಪಗಳಿಗೆ ಟೈಮರ್ ಅಳವಡಿಸಲು, ಉದ್ಯಾನವನಗಳ ನಿರ್ವಹಣೆ ಮಾಡಲು, ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಅಸಮರ್ಪಕ ನೀರಿನ ಪೂರೈಕೆ, ರಸ್ತೆ ಗುಡಿಸುವಿಕೆ, ಹಸಿ ತ್ಯಾಜ್ಯ ಹಾಗೂ ಒಣತ್ಯಾಜ್ಯದ ಸಂಗ್ರಹಣೆ ಕಾರ್ಯ ಸಮರ್ಪಕವಾಗಿರುವುದಿಲ್ಲ.

**ನೋಡೆಲ್ ಅಧಿಕಾರಿ ರವರು ಮಾತನಾಡುತ್ತಾ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧ ಪಟ್ಟ ಅಧಿಕಾರಿಗಳಿಗೆ ಸೂಚಿಸುವುದಾಗಿ ಸಭೆಯಲ್ಲಿ ತಿಳಿಸಿದರು.**

ನೋಡೆಲ್ ಅಧಿಕಾರಿಗಳು ಈ ಮೇಲ್ಕಂಡ ಅಂಶಗಳ ಬಗ್ಗೆ ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳು ಹಾಗೂ ಸದಸ್ಯರೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ 11, ಕುವೆಂಪುನಗರ

-ಸಹಿ-
ನೋಡೆಲ್ ಅಧಿಕಾರಿ ಹಾಗೂ
ಸಹಾಯಕ ಕಾರ್ಯಪಾಲಕ ಅಭಿಯಂತರರು

ಪ್ರತಿಯನ್ನು:

1. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ ಆಯುಕ್ತರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
3. ಮಾನ್ಯ ಅಪರ ಆಯುಕ್ತರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು, ಯಲಹಂಕ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಿಭಾಗ, ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
8. ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಕಮಿಟಿ ರವರ ಮಾಹಿತಿಗಾಗಿ ಸಲ್ಲಿಸಿದೆ.
9. ವಾರ್ಡ್ ಕಮಿಟಿ ಸದಸ್ಯರುಗಳ ಮಾಹಿತಿಗಾಗಿ ಸಲ್ಲಿಸಿದೆ.
10. ಕಛೇರಿ ಕಡತಕ್ಕೆ.